ಸಮಗ್ರ ಶಿಕ್ಷಣ – ಕರ್ನಾಟಕ

Sikshana FOUNDATION
Love of learning

# "ಪ್ರೇರಣಾ ಕಾರ್ಯಕ್ರಮದ" ಪುನಶ್ಚೇತನ ತರಬೇತಿ

# 2022–23

# ಶಿಕ್ಷಣ ಫೌಂಡೇಶನ್ ಸಂಸ್ಥೆಯ ಹಿನ್ನಲೆ

ಶೈಕ್ಷಣಿಕ ಹಾಗು ಶೈಕ್ಷಣೇತರ ಚಟುವಟಿಕೆಗಳಿಗೆ ಪೂರಕವಾಗಿ ಕಾರ್ಯ ನಿರ್ವಹಿಸುವ ಒಂದು ಸರ್ಕಾರೇತರ ಸಂಸ್ಥೆ

# ಕಾರ್ಯಕ್ರಮದ ವಿಸ್ತರಣೆ

ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಗುಜರಾತ್

# ಸಂಸ್ಥೆಯ ಕಾರ್ಯಕ್ರಮಗಳು


***School Program***

- Prerana
- FLN ( Foundational Literacy & Numeracy)
- STEP (Sikshana Technology in Education Program)
- SGEP & Volunteering ( Sikshana Girl Empowerment Program)

***Community program***

- Grama Digi Vikasana
- Community Health Initiative

# ಪ್ರೇರಣಾ ಕಾರ್ಯಕ್ರಮದ ವಿನ್ಯಾಸ






ಶಿಕ್ಷಣ ಸ್ಟಾರ್



ಸಹಪಾಠಿ ಕಲಿಕೆ / ಪ್ರೇರಣಾ ಕ್ಲಬ್




ಅಭ್ಯಾಸ ಪುಸ್ತಕಗಳು/ಮಾಡ್ಯುಲ್‌ಗಳು ಮತ್ತು ಪ್ರಾಜೆಕ್ಟ್ ಪ್ಲಾನರ್‌ಗಳು



ನನ್ನ ಕಲಿಕಾ ಪ್ರಯಾಣ (ಸಚಿತ್ರ ಪ್ರಗತಿ ನೋಟ)

ಕರ್ನಾಟಕ ಸರ್ಕಾರ

ಸಮಗ್ರ ಶಿಕ್ಷಣ – ಕರ್ನಾಟಕ

Sikshana FOUNDATION
Love of learning

# ಪ್ರೇರಕ ಮತ್ತು ಪುರಸ್ಕಾರಗಳು
# (ಸ್ಟಾರ್)



**ಉದ್ದೇಶ:**

ವಿದ್ಯಾರ್ಥಿಯು ಶಾಲಾ ಹಂತದ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಬೇಕು ಜೊತೆಗೆ ತರಗತಿಯಲ್ಲಿ ಶಿಕ್ಷಕರ ಪಾತ್ರ ಮತ್ತಷ್ಟು ಪರಿಣಾಮಕಾರಿಯಾಗಬೇಕು.

# ಪ್ರೇರಕ ಮತ್ತು ಪುರಸ್ಕಾರಗಳು (ಸ್ಟಾರ್)

## ಹಸಿರು ಬಣ್ಣದ ಸ್ಟಾರ್

- ವಿದ್ಯಾರ್ಥಿಯ ನಿರಂತರ ಹಾಜರಾತಿ.
- ಶಾಲೆ, ತರಗತಿ ಹಾಗೂ ವೈಯಕ್ತಿಕ ಸ್ವಚ್ಛತೆ. (ಶೌಚಾಲಯ ಸ್ವಚ್ಛತೆ ಹೊರತು ಪಡಿಸಿ)
- ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕೆ ವಹಿಸಿದರೆ.
- ಪರಿಸರ ಕಾಳಜಿ ಮತ್ತು ಸಂರಕ್ಷಣೆಗೆ ಸ್ಟಾರ್ ವಿತರಣೆ.

## ಬೆಳ್ಳಿ ಬಣ್ಣದ ಸ್ಟಾರ್

- ಮಗುವಿನ ಮೊದಲ ಕಲಿಕೆಗೆ.
- ಶಿಕ್ಷಕರ ಪ್ರಶ್ನೆಗೆ ಉತ್ತರಿಸಿದರೆ ಅಥವಾ ಶಿಕ್ಷಕರಿಗೆ ಪ್ರಶ್ನೆಗಳನ್ನು ಕೇಳಿದರೆ.
- ಓದು, ಬರಹ, ಲೆಕ್ಕ ಹಾಗೂ ಅಭ್ಯಾಸ ಪುಸ್ತಕಗಳನ್ನು ಪೂರ್ಣಗೊಳಿಸಿದರೆ.
- ಶಾಲೆ ಮತ್ತು ಸಮುದಾಯದಲ್ಲಿ ಸಾಂಕ್ರಾಮಿಕ ರೋಗಗಳ ಬಗ್ಗೆ ಜಾಗೃತಿ ಮೂಡಿಸಿದರೆ.
- ಯೋಜನೆಗಳನ್ನು ಪೂರ್ಣಗೊಳಿಸಿದರೆ.
- ಶಿಕ್ಷಕರು ನೀಡಿರುವ ಮನೆಗೆಲಸವನ್ನು ಪೂರ್ಣಗೊಳಿಸಿದರೆ.

# ಗುಲಾಬಿ ಬಣ್ಣದ ಸ್ಟಾರ್

- ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸಿದರೆ. (ಸಾಂಸ್ಕೃತಿಕ ಚಟುವಟಿಕೆಗಳು, ಕ್ರೀಡೆ, ಚಿತ್ರಕಲೆ ಇತ್ಯಾದಿ)

# ನಿರ್ಭಯ ವಾತವರಣ

## ಸಹಪಾಠಿ ಕಲಿಕೆ



**ಉದ್ದೇಶ:**

ವಿದ್ಯಾರ್ಥಿಗಳಲ್ಲಿ ಸಹಕಾರ ಮನೋಭಾವನೆ ಬೆಳೆಸುವುದು ಮತ್ತು ಕಲಿಕಾ ಪೂರಕ ನಿರ್ಭಯ ವಾತವರಣವನ್ನು ನಿರ್ಮಾಣ ಮಾಡುವುದು.

ಸಮಗ್ರ ಶಿಕ್ಷಣ – ಕರ್ನಾಟಕ

Sikshana FOUNDATION Love of learning

**ಪ್ರಯೋಜನಗಳು:**

- ಶೈಕ್ಷಣಿಕ ಪರಿಹಾರ ಬೋಧನಾ ಕಾರ್ಯಕ್ಕೆ ಸಹಕಾರಿಯಾಗಿದೆ
- ನಿಧಾನಗತಿಯಲ್ಲಿ ಕಲಿಯುವ ವಿದ್ಯಾರ್ಥಿಗಳಲ್ಲಿ ಅತ್ಮವಿಶ್ವಾಸ ಮೂಡಿಸಿ ಕಲಿಕಾ ಸಾಮರ್ಥ್ಯ ಹೆಚ್ಚಿಸುವುದು.
- ಸಹಕಾರ ಮನೋಭಾವ ಬೆಳೆಯುವುದರಿಂದ ಕಲಿಕಾ ಪೂರಕ ವಾತವರಣ ನಿರ್ಮಾಣವಾಗುತ್ತದೆ.

**ರಚನೆ ಮತ್ತು ಕಾರ್ಯಗಳು:**

- ತರಗತಿವಾರು ಸಹಪಾಠಿಗಳ ಜೋಡಿ/ಗುಂಪು ರಚನೆ ಆಗುತ್ತದೆ. (ಕನಿಷ್ಠ 2 ಮತ್ತು ಗರಿಷ್ಠ 5 ವಿದ್ಯಾರ್ಥಿಗಳು)
- ಪ್ರೇರಣಾ ಕ್ಲಬ್ ನಾಯಕ/ಶಿಕ್ಷಕರು ಈ ಪರಿಕಲ್ಪನೆ ಕುರಿತು ಮಾಹಿತಿ ನೀಡಬೇಕು.
- ಸಹಪಾಠಿ ಗುಂಪಿನಲ್ಲಿ ವಿದ್ಯಾರ್ಥಿ ಓದಲು ಮತ್ತು ಬರೆಯಲು ಪ್ರಾರಂಭಿಸುತ್ತಾರೆ.
- ಬುನಾದಿ ಮತ್ತು ತರಗತಿ ಹಂತದ ಸಾಮರ್ಥ್ಯಗಳನ್ನು ಕಲಿಯುವಂತೆ ಮಾಡುವುದು.
- ಈ ಪ್ರಕ್ರಿಯೆಯು ಶಾಲಾ ಅವಧಿಯಲ್ಲಿ ಪ್ರತಿ ದಿನ 45 ನಿಮಿಷ ನಡೆಯುತ್ತದೆ. ಈ ಅವಧಿಯಲ್ಲಿ ವಿವಿಧ ವಿಷಯಗಳನ್ನು ವಿದ್ಯಾರ್ಥಿಗಳು ಅಭ್ಯಸಿಸುತ್ತಾರೆ.
- ಶಿಕ್ಷಕರು ಸಹಪಾಠಿಗಳ ಜೊಡಿ ರಚನೆ ಮಾಡುವುದು, ಹಾಗೂ ಈ ಪ್ರಕ್ರಿಯೆ ನಡೆಯಲು ಶಾಲಾ ಅವಧಿಯಲ್ಲಿ ಅವಕಾಶ ಮಾಡಿ ಕೊಡುವುದು.

ಸೂಚನೆ: ವಿದ್ಯಾರ್ಥಿಗಳು ಮಾಸ್ಕ್ ಧರಿಸಿ, ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಅಭ್ಯಾಸ ಮಾಡಿಸುವುದು.

# ಪ್ರೇರಣಾ ಕ್ಲಬ್



**ಉದ್ದೇಶ:**

ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ, ಸಹಕಾರ ಮನೋಭಾವ, ಸಹಯೋಗ ಹಾಗೂ ಜವಬ್ದಾರಿಗಳ ಹಂಚಿಕೆ ಮತ್ತು ವಿದ್ಯಾರ್ಥಿಯ ಕಲಿಕೆಯ ಮಟ್ಟವನ್ನು ಸುಧಾರಿಸಲು ಸಹಕಾರಿ.

ಸಮಗ್ರ ಶಿಕ್ಷಣ – ಕರ್ನಾಟಕ


Sikshana FOUNDATION
Love of learning


# ರಚನೆ ಪ್ರಕ್ರಿಯೆ:

ಶೈಕ್ಷಣಿಕ ವರ್ಷದ ಪ್ರಾರಂಭದ ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಮುಖ್ಯ ಶಿಕ್ಷಕರ ಉಸ್ತುವಾರಿಯಲ್ಲಿ ಮಾರ್ಗದರ್ಶಕ ಶಿಕ್ಷಕರು ಶಾಲೆಯ ಎಲ್ಲಾ ಶಿಕ್ಷಕರ ಜೊತೆ ಕೂಡಿಕೊಂಡು 4 ರಿಂದ 9ನೇ ತರಗತಿಯ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಕ್ಲಬ್ ರಚನೆ ಮಾಡಲಾಗುತ್ತದೆ.

- ಮುಖ್ಯ ಶಿಕ್ಷಕರು ಮಾರ್ಗದರ್ಶಿ ಶಿಕ್ಷಕರನ್ನು ನೇಮಿಸುತ್ತಾರೆ.
- ಮಾರ್ಗದರ್ಶಕ ಶಿಕ್ಷಕರು ಪ್ರೇರಣಾ ಕ್ಲಬ್ ರಚನೆ ಮಾಡುತ್ತಾರೆ.
- 4 ರಿಂದ 9ನೇ ತರಗತಿಯ ಪ್ರತಿ 10 ವಿದ್ಯಾರ್ಥಿಗಳಿಗೆ ಒಬ್ಬರಂತೆ ವಿದ್ಯಾರ್ಥಿ/ ವಿದ್ಯಾರ್ಥಿನಿಯನ್ನು ಸದಸ್ಯರನ್ನಾಗಿ ಆಯ್ಕೆ ಮಾಡುತ್ತಾರೆ.
- ಕ್ಲಬ್‌ನ ಅಧ್ಯಕ್ಷರನ್ನಾಗಿ 7/8/9 ನೇ ತರಗತಿಯ ವಿದ್ಯಾರ್ಥಿ/ನಿಯನ್ನು ಆಯ್ಕೆಮಾಡಿ ಕ್ಲಬ್ ರಚನೆ ಮಾಡುತ್ತಾರೆ.

# ಪ್ರೇರಣಾ ಕ್ಲಬ್‌ನ ಸಂಪನ್ಮೂಲಗಳು





Sikshana FOUNDATION Love of Learning

ಸಮಗ್ರ ಶಿಕ್ಷಣ – ಕರ್ನಾಟಕ

ಪ್ರೇರಣಾ ಕ್ಲಬ್ ನಡಾವಳಿ ಪುಸ್ತಕ 2020 – 21

Prerana Club Meeting Book 2020 – 21

ಶಾಲೆ : School :　　ಶಾಲೆಯ ಕೋಡ್ : School Code :

ತಾಲೂಕು : Taluk :　　ಜಿಲ್ಲೆ : District :

ಮಾರ್ಗದರ್ಶಿ ಶಿಕ್ಷಕರ ಹೆಸರು : Guide Teacher's Name :　　ಮೊಬೈಲ್ ಸಂಖ್ಯೆ : Mobile No :

ಸಿ. ಆರ್. ಪಿ. ಹೆಸರು : C. R. P. Name :　　ಮೊಬೈಲ್ ಸಂಖ್ಯೆ : Mobile No :

- ಮಾರ್ಗದರ್ಶಿ ಶಿಕ್ಷಕರು ಆಯ್ಕೆಯಾದ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಬ್ಯಾಡ್ಜ್‌ಗಳನ್ನು ವಿತರಿಸಿ, ನಡಾವಳಿ ಪುಸ್ತಕವನ್ನು ಬಳಸಿಕೊಂಡು ಕ್ಲಬ್‌ನ ಉದ್ದೇಶ ಮತ್ತು ಜವಬ್ದಾರಿಗಳ ಬಗ್ಗೆ ವಿವರಿಸುವುದು.




## ಪ್ರಯೋಜನಗಳು:

- ಶಾಲೆಯಲ್ಲಿ ನಡೆಯುವ ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳನ್ನು ನಡೆಸಲು ಸಹಾಯ ಮಾಡುತ್ತದೆ.
- ಕ್ಲಬ್‌ನ ಸದಸ್ಯರು ಸಹಪಾಠಿ ಕಲಿಕೆಯ ಮೂಲಕ ತರಗತಿಯಲ್ಲಿ ನಿಧಾನವಾಗಿ ಕಲಿಯುವವರಿಗೆ ಸಹಾಯ ಮಾಡುತ್ತಾರೆ.

## ಕಾರ್ಯವಿಧಾನ:

- 15 ದಿನಗೊಳಿಗೊಮ್ಮೆ ಪ್ರೇರಣಾ ಕ್ಲಬ್‌ನ ನಾಯಕರು ಮಾರ್ಗದರ್ಶಿ ಶಿಕ್ಷಕರ ಸಮ್ಮುಖದಲ್ಲಿ ವಿವಿಧ ವಿಷಯಗಳ ಕುರಿತು ಸಭೆ ನಡೆಸುತ್ತಾರೆ. (ಸಾಮಾಜಿಕ ಅಂತರ ಕಾಪಾಡಿಕೊಂಡು)
- ಸಭೆಯಲ್ಲಿ ಚರ್ಚಿಸಿದ ವಿಷಯಗಳನ್ನು ಕ್ಲಬ್‌ನ ನಡಾವಳಿ ಪುಸ್ತಕದಲ್ಲಿ ದಾಖಲಿಸುವುದು.
- ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸುವುದು ಹಾಗೂ ಜಾಗೃತಿ ಮೂಡಿಸುವುದು.
- ತಂಡದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಓದುವ, ಲೆಕ್ಕ ಬಿಡಿಸುವ ಹಾಗೂ ಬರೆಯುವ ಸಾಮರ್ಥ್ಯಗಳನ್ನು ಗಳಿಸುವಂತೆ ನೋಡಿಕೊಳ್ಳುವುದು.
- ಪ್ರೇರಣಾ ಕ್ಲಬ್ ಚಟುವಟಿಕೆಗಳನ್ನು ಮಾಡಲು ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಬೇಕು.

# ರಚನಾತ್ಮಕ ಕಲಿಕೆ
# ಅಭ್ಯಾಸ ಪುಸ್ತಕಗಳು


## ಉದ್ದೇಶ:

ನಿರಂತರ ಅಭ್ಯಾಸವು ಕಲಿಕೆಯ ಒಂದು ಭಾಗ, ಕಲಿಕೆಯನ್ನು ಮತಷ್ಟು ಆಸಕ್ತಿದಾಯಕಗೊಳಿಸಲು, ಭಯವನ್ನು ಹೋಗಲಾಡಿಸಲು ಹಾಗು ಪರಿಕಲ್ಪನೆ ಅರ್ಥೈಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಕಾರಿಯಾಗುತ್ತದೆ.

**ಪ್ರಯೋಜನಗಳು:**

- ರಚನಾತ್ಮಕ ಕಲಿಕೆಗೆ ಪೂರಕ ವಾತವರಣವನ್ನು ಸೃಷ್ಟಿಸುವ ಮೂಲಕ ವಿದ್ಯಾರ್ಥಿಗಳನ್ನು ಗುಣಾತ್ಮಕ ಕಲಿಕೆಗೆ ಪ್ರೇರೇಪಿಸುತ್ತದೆ.
- ಕಲಿಕೆಯನ್ನು ತರಗತಿಯ ಕೋಣೆಗೆ ಸೀಮಿತಗೊಳಿಸದೆ ನಿತ್ಯಜೀವನಕ್ಕೂ ಅಳವಡಿಸಬಹುದಾಗಿದೆ.
- ಸ್ವವೇಗ ಮತ್ತು ಸ್ವಪ್ರೇರಿತ ಕಲಿಕೆಯನ್ನು ಆಸಕ್ತಿದಾಯಕಗೊಳಿಸುವುದು ಮತ್ತು ಉತ್ತೇಜಿಸುವುದು.
- ವಿದ್ಯಾರ್ಥಿಗಳು ಸ್ವಮೌಲ್ಯಮಾಪನ ಮಾಡಿಕೊಳ್ಳಲು ಸಹಕಾರಿ.

**ಅಭ್ಯಾಸ ಪುಸ್ತಕಗಳ ಬಳಕೆಯ ವಿಧಾನ:**

- ಮೊದಲು ಬುನಾದಿ ಹಂತದ ಸಾಮರ್ಥ್ಯಗಳನ್ನು ಕಲಿಯುವುದು.
- ಪ್ರತಿ ಘಟಕ ಮುಗಿದ ನಂತರ ಸಂಬಂಧಿಸಿದ ಅಭ್ಯಾಸ ಪುಸ್ತಕದ ಚಟುವಟಿಕೆಗಳನ್ನು ಮಾಡಿಸುವುದು.
- ವಿದ್ಯಾರ್ಥಿಗಳೆ ಸ್ವತಃ ಪೂರ್ಣಗೊಳಿಸಲು ಪ್ರೇರೇಪಿಸುವುದು.
- ಅಭ್ಯಾಸ ಮಾಡುವಾಗ ವಿದ್ಯಾರ್ಥಿಗಳಿಗೆ ಸಮಸ್ಯೆ ಕಂಡು ಬಂದಲ್ಲಿ ಅವರಿಗೆ ಮಾರ್ಗದರ್ಶನ ನೀಡುವುದು.
- ತಿಂಗಳಿಗೊಮ್ಮೆ ಶಾಲಾ ಹಂತದಲ್ಲಿ ಅಭ್ಯಾಸ ಪುಸ್ತಕಗಳ ಪ್ರದರ್ಶನ ಮಾಡುವುದು.

# ಉದ್ದೇಶ ಪೂರ್ವಕ ಕಲಿಕೆ

# ನನ್ನ ಕಲಿಕಾ ಪ್ರಯಾಣ(ಸಚಿತ್ರ ಪ್ರಗತಿ ನೋಟ)




**ಉದ್ದೇಶ:**

ವಿದ್ಯಾರ್ಥಿಗಳು ಕಲಿತ ಮತ್ತು ಕಲಿಯಬೇಕಾದ ಸಾಮರ್ಥ್ಯಗಳ ಬಗ್ಗೆ ಅರಿವು ಮೂಡಿಸಲು ಹಾಗೂ ಅವರ ಪ್ರಯತ್ನಗಳನ್ನು ಗುರುತಿಸಲು ಮತ್ತು ಪ್ರೇರೇಪಿಸಲು ಸಹಾಯವಾಗುತ್ತದೆ.

## ಪ್ರಮುಖ ಪ್ರಯೋಜನಗಳು:


- ವಿದ್ಯಾರ್ಥಿಗಳಿಗೆ ಅವರ ಕಲಿಕಾ ಗುಣಮಟ್ಟವನ್ನು ತಿಳಿಸಲು ಪೂರಕವಾಗಿದೆ.
- ವಿದ್ಯಾರ್ಥಿಗಳ ಪರಿಶ್ರಮ ಮತ್ತು ಕಲಿಕೆಯನ್ನು ಉತ್ತೇಜಿಸಲು.(ನಿರಂತರ ಅಭ್ಯಾಸ ಪ್ರೇರಣಾ ಪುರಸ್ಕಾರ ಪತ್ರ)
- ವಿದ್ಯಾರ್ಥಿಗಳ ಕಲಿಕಾ ಪ್ರಕ್ರಿಯೆಯನ್ನು ಕಲಿಕಾ ನಕ್ಷೆಯ ಮೂಲಕ ನೀಡುವುದರಿಂದ ಪೋಷಕರಿಗೆ/ಸಮುದಾಯಕ್ಕೆ ಕಲಿಕೆ ಪ್ರಗತಿ ಕುರಿತು ನಿರ್ದಿಷ್ಟ ಮಾಹಿತಿಯನ್ನು ನೀಡುವಲ್ಲಿ (ಅನಕ್ಷರಸ್ಥ ತಂದೆ ತಾಯಿಗಳಿಗೆ) ಸಹಕಾರಿಯಾಗಿದೆ.
- ಸೇತುಬಂಧ ಕಾರ್ಯಕ್ರಮಕ್ಕೆ ಪೂರಕವಾಗಿಯೂ ಬಳಸಬಹುದು.

# ನನ್ನ ಕಲಿಕಾ ನಕ್ಷೆ

4 ರಿಂದ 7ನೆ ತರಗತಿವರೆಗೆ ಬುನಾದಿ ಹಾಗೂ ತರಗತಿ ಹಂತದ ಕಲಿಕಾ ಸಾಮರ್ಥ್ಯಗಳ ಪಟ್ಟಿಯ ಜೊತೆಗೆ ನನ್ನ ಕಲಿಕಾ ನಕ್ಷೆಯನ್ನು ಒಳಗೊಂಡಿದೆ.





**ಬುನಾದಿ ಹಂತದ ಸಾಮರ್ಥ್ಯಗಳು–ಪೂರ್ವ ಪರೀಕ್ಷೆ ಮತ್ತು ಸಾಫಲ್ಯ ಪರೀಕ್ಷೆ**
**ತರಗತಿ ಹಂತದ ಸಾಮರ್ಥ್ಯಗಳು– ರೂಪಣಾತ್ಮಕ ಪರೀಕ್ಷೆ**





ಬುನಾದಿ ಹಂತದ ಗಣಿತ ಸಾಮರ್ಥ್ಯಗಳು (F1)
ತರಗತಿ ಹಂತದ ಗಣಿತ ಸಾಮರ್ಥ್ಯಗಳು (M1)
ತರಗತಿ ಹಂತದ ಕನ್ನಡ ಸಾಮರ್ಥ್ಯಗಳು (L1)

# ನನ್ನ ಕಲಿಕಾ ನಕ್ಷೆ

8 ಮತ್ತು 9ನೇ ತರಗತಿಗೆ ಬುನಾದಿ ಮತ್ತು ತರಗತಿ ಹಂತದ ಕಲಿಕಾ ಸಾಮರ್ಥ್ಯಗಳು ಹಾಗೂ ವ್ಯಾವಹಾರಿಕ ಗಣಿತ ಮತ್ತು ಇಂಗ್ಲಿಷ್ ಸಾಮರ್ಥ್ಯಗಳ ಪಟ್ಟಿಯ ಜೊತೆಗೆ ತಂತ್ರಜ್ಞಾನ ಸಾಕ್ಷರತೆಯ ಸಾಮರ್ಥ್ಯಗಳ ಪಟ್ಟಿಯನ್ನು ಒಳಗೊಂಡಿರುತ್ತದೆ.




| ಐ ಸಿ ಟಿ ಸಾಮರ್ಥ್ಯಗಳು | |
|---|---|
| ಗಣಕಯಂತ್ರದ ವಿವಿಧ ಭಾಗಗಳನ್ನು ನಾನು ಗುರುತಿಸಬಲ್ಲೆ. | ನನಗೆ ಮೂಲಭೂತ ಲೋಗೊ ಪ್ರೋಗ್ರಾಮಿಂಗ್ ತಿಳಿದಿದೆ. |
| ನಾನು ಕಲೆಯನ್ನು ಡಿಜಿಟಲ್ ರೂಪದಲ್ಲಿ ರಚಿಸಬಲ್ಲೆ. | ನಾನು ಅಂತರ್ಜಾಲದಿಂದ ಮಾಹಿತಿಯನ್ನು ಹುಡುಕಬಲ್ಲೆ ಮತ್ತು ಪಡೆಯಬಲ್ಲೆ |
| ನಾನು ಸ್ಪ್ರೆಡ್‌ಶೀಟ್‌ನಲ್ಲಿ ದತ್ತಾಂಶವನ್ನು ಓದಬಲ್ಲೆ, ಸಂಗ್ರಹಿಸಬಲ್ಲೆ, ಕ್ರಮಬದ್ಧವಾಗಿ ಇಡುವುದು ಮತ್ತು ಅವಶ್ಯಕತೆ ತಕ್ಕಂತೆ ನಿರೂಪಿಸಬಲ್ಲೆ. | ನಾನು ಆಡಿಯೊ ಫೈಲ್‌ಗಳನ್ನು ರಚಿಸಬಲ್ಲೆ. |
| ನನಗೆ ಮುಂದುವರೆದ ಲೋಗೊ ಪ್ರೋಗ್ರಾಮಿಂಗ್ ತಿಳಿದಿದೆ. | ನಾನು ಕಥೆಯನ್ನು ಡಿಜಿಟಲ್ ರೂಪದಲ್ಲಿ ರಚಿಸಬಲ್ಲೆ. |

**ಬುನಾದಿ ಹಂತದ ಸಾಮರ್ಥ್ಯಗಳು–ಪೂರ್ವಪರೀಕ್ಷೆ ಮತ್ತು ಸಾಫಲ್ಯ ಪರೀಕ್ಷೆ**
**ತರಗತಿ ಹಂತದ ಸಾಮರ್ಥ್ಯಗಳು– ರೂಪಣಾತ್ಮಕ ಮೌಲ್ಯಮಾಪನ**

# ನಿರಂತರ ಅಭ್ಯಾಸ ಪ್ರೇರಣಾ ಪುರಸ್ಕಾರ ಪತ್ರ

ನಿರಂತರ ಅಭ್ಯಾಸ ಪ್ರೇರಣಾ ಪುರಸ್ಕಾರ ಪತ್ರದಲ್ಲಿ ನಿರಂತರ ಹಾಜರಾತಿ, ಸಹಪಾಠಿ ಕಲಿಕೆ, ಅಭ್ಯಾಸ ಪುಸ್ತಕಗಳು, ಸ್ಟಾರ್, 21ನೇ ಶತಮಾನದ ಕೌಶಲಗಳು, ಸುರಕ್ಷತಾ ಕ್ರಮ ಮತ್ತು ಟ್ರೋಫಿ ಸ್ಟಿಕ್ಕರ್ ಗಳನ್ನು ಒಳಗೊಂಡಿರುತ್ತದೆ.




ಸಮಗ್ರ ಶಿಕ್ಷಣ – ಕರ್ನಾಟಕ

Sikshana FOUNDATION Love of learning

# ಶಾಲಾ ಪ್ರಾರಂಭದ ಪೂರ್ವದಲ್ಲಿ ಪ್ರೇರಣಾ ಕಾರ್ಯಕ್ರಮದ ತಯಾರಿ.............

- ಪ್ರೇರಣಾ ಕಾರ್ಯಕ್ರಮದ ಎಲ್ಲಾ ಚಟುವಟಿಕೆಗಳ ಭಿತ್ತಿ ಚಿತ್ರ ಹಾಕುವುದು.
- ತರಗತಿವಾರು ಸಹಪಾಠಿ ಗುಂಪುಗಳ ಪಟ್ಟಿ ಮಾಡುವುದು.
- ಪ್ರೇರಣಾ ಕ್ಲಬ್ ಚಾರ್ಟ್, ತಿಂಗಳುವಾರು ಕ್ರಿಯಾ ಯೋಜನೆ ತಯಾರಿಸುವುದು.
- ಪ್ರೇರಣಾ ಕ್ಲಬ್‌ನ ಜವಾಬ್ದಾರಿಗಳನ್ನು ಪಟ್ಟಿ ಮಾಡುವುದು.
- ಪ್ರೇರಣಾ ಕಾರ್ಯಕ್ರಮದ ಸಂಪನ್ಮೂಲಗಳು ಶಾಲೆಗೆ ಬಂದ ನಂತರ ದಾಖಲಾತಿ ಸಂಖ್ಯೆಗೆ ಅನುಗುಣವಾಗಿಯೆ ಎಂದು ಒಮ್ಮೆ ಪರಿಶೀಲಿಸಿಕೊಳ್ಳಿ

# ಶಾಲಾ ಪ್ರಾರಂಭದ ನಂತರ ಶಾಲೆಗಳಲ್ಲಿ ಪ್ರೇರಣಾ ಕಾರ್ಯಕ್ರಮ ಅನುಷ್ಠಾನ ಮಾಡುವ ಅಂಶಗಳು

- ಮೂರು ಬಣ್ಣದ ಸ್ಟಾರ್‌ಗಳನ್ನು ಸಮರ್ಪಕವಾಗಿ ಬಳಸುವುದು.
- ಸಾಮಾಜಿಕ ಅಂತರದಿಂದ ಸಹಪಾಠಿ ಕಲಿಕೆ ಆಯೋಜನೆ ಮಾಡುವುದು.
- ಶಾಲೆಗಳಲ್ಲಿ ಪ್ರೇರಣಾ ಕ್ಲಬ್ ರಚನೆ ಮಾಡುವುದು ಮತ್ತು ಪ್ರೇರಣಾ ಕ್ಲಬ್ ಚಾರ್ಟ್ ಮಾಡಿ ಮುಖ್ಯ ಶಿಕ್ಷಕರ ಕೊಠಡಿಯಲ್ಲಿ ಹಾಕುವುದು.
- 15 ದಿನಗೊಳಿಗೊಮ್ಮೆ ಪ್ರೇರಣಾ ಕ್ಲಬ್ ಸಭೆಯನ್ನು ಸಾಮಾಜಿಕ ಅಂತರ ಕಾಪಾಡಿಕೊಂಡು ಆಯೋಜನೆ ಮಾಡುವುದು ಹಾಗೂ ಸಭೆಯ ಮುಖ್ಯ ಆಂಶಗಳನ್ನು ನಡಾವಳಿ ಪುಸ್ತಕದಲ್ಲಿ ಬರೆಯುವುದು.
- ಎಲ್ಲಾ ವಿದ್ಯಾರ್ಥಿಗಳು ಅಭ್ಯಾಸ ಪುಸ್ತಕ ಬರೆಯುವಂತೆ ನೋಡುವುದು.
- ಸಚಿತ್ರ ಪ್ರಗತಿ ನೋಟ (ನನ್ನ ಕಲಿಕಾ ಪ್ರಯಾಣ) ಕಾರ್ಡ್‌ಗಳನ್ನು ಸೂಕ್ತವಾಗಿ ಉಪಯೋಗಿಸುವುದು.
- ಒಂದು ತಂಡ ಒಂದು ಗಿಡವನ್ನು ನೆಟ್ಟು ಅದನ್ನು ದತ್ತು ಪಡೆದು ಪೋಷಣೆ ಮಾಡುವುದು
- ಕ್ಲಾಪ್ ಮತ್ತು ಪಿ.ಬಿ.ಎಲ್ ಕಾರ್ಯಕ್ರಮದ ಪ್ರಕ್ರಿಯೆಯನ್ನು ಓದಿಕೊಂಡು ಅನುಷ್ಠಾನ ಮಾಡುವುದು.

# Thank You